ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಮೈಲೋ ಬೇಕು ಎಂದು ನಾವು ಇಂಡಿಯಾ ಸರ್ಕಾರಕ್ಕೆ ಬರೆದಿದ್ದೆವು, ಅವರು ತಮ್ಮಲ್ಲ ದಾಸ್ತಾನು ಇಲ್ಲ ಕೊಡುವುದಕ್ಕೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ.

Loan for Upper Krishna Project from World Bank

64. Sri M. NAGAPPA (Raichur).—

Will the Chief Minister refer to replies furnished to starred Question No. 95. (518) (Sixth Session) and to state :—

(*a*) whether the World Bank has agreed to advance loan for Upper Krishna Project ;

(*b*) if not, the reasons for delay ?

Sri VEERENDRA PATIL (Chief Minister).—

(*a*) No communication is received from Government of India so far in this matter.

(*b*) Does not arise in view of reply to (*a*) above.

ಶ್ರೀ ಎಂ. ನಾಗಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕಿನವರು ಸಾಲ ನೀಡುವ ಬಗ್ಗೆ ಭಾರತ ಸರ್ಕಾರದವರಿಂದ ಈ ವರೆಗೆ ಯಾವ ಕಾಗದ ಪತ್ರವೂ ಬಂದಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ, ತಾವು ಇದುವರೆಗೆ ದೆಹಲಿಗೆ ಅನೇಕ ಸಲ ಹೋಗಿ ಬರುತ್ತಿದ್ದೀರಿ, ಇದರ ಬಗ್ಗೆ ಕೇಂದ್ರ ಸರ್ಕಾರದವರೊಡನೆ ಮಾತುಕತೆ ನಡೆಸಬೇಕೆಂಬ ಆಸಕ್ತಿ ಇದೆಯೇ ಅಥವಾ ಇಲ್ಲವೇ, ಈ ಪ್ರಾಜೆಕ್ಟನ್ನು ಕಾರ್ಯಗತ ಮಾಡಬೇಕೆಂದು ಆಸಕ್ತಿ ಸರ್ಕಾರಕ್ಕೆ ಇದೆಯೇ ಹೇಗೆ ? ಹಾಗೊಂದು ವೇಳೆ ಈ ಬಗ್ಗೆ ತಮಗೆ ಆಸಕ್ತಿ ಇದ್ದರೆ ತಾವು ಅನೇಕ ಸಲ ದೆಹಲಿಗೆ ಹೋದಾಗ ಅಲ್ಲಿ ಕೇಂದ್ರ ಸರ್ಕಾರದವರೊಡನೆ ಏತಕ್ಕೆ ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲ ?

†ಶ್ರೀ ವೀರೇಂದ್ರ ಪಾಟೀರ್.—ಇದರ ಬಗ್ಗೆ ನಾವು ಕೇಂದ್ರ ಸರ್ಕಾರದವರೊಡನೆ ವ್ಯವಹಾರ ಮಾಡಿದ್ದೇವೆ. ನ್ಯಾಷನಲ್ ಡೆವಲಪ್‌ಮೆಂಟ್ ಟೀಮಿನವರು ಇಲ್ಲಿಗೆ ಬಂದು ಕೆಲವು ಇನ್‌ಫರ್‌ಮೇಷನ್‌ಗಳನ್ನು ಕೇಳಿದ್ದಾರೆ. ಅದನ್ನು ಕೊಟ್ಟಿದೆ. ಮತ್ತು ಕೆಲವು ಪ್ರತಿನಿಧಿಗಳು ಇಲ್ಲಿಗೆ ಬಂದು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಮತ್ತು ಅವರಿಗೆ ಬೇಕಾದ ಇನ್‌ಫರ್‌ಮೇಷನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ವರ್ಲ್ಡ್ ಬ್ಯಾಂಕಿನಿಂದ ಇನ್ನೂ ಉತ್ತರ ಬಂದಹಾಗೆ ಕಾಣುವುದಿಲ್ಲ. ಮತ್ತು ಈ ಬಗ್ಗೆ ಇಂಡಿಯಾ ಸರ್ಕಾರದವರು ಯಾವ ನಿರ್ಣಯವನ್ನೂ ತೆಗೆದು ಕೊಂಡಿಲ್ಲ. ವರ್ಲ್ಡ್ ಬ್ಯಾಂಕಿನವರು ಸಹಾಯ ಕೊಡುವ ತನಕ ಕೈಕಟ್ಟಿ ಕುಳಿತುಕೊಳ್ಳಬೇಕಾಗಿಲ್ಲ. ಈ ಪ್ರಾಜೆಕ್ಟಿನ ಕೆಲಸ ರಭಸದಿಂದ ನಡೆಯುತ್ತಿದೆ.

ಶ್ರೀ ಎಂ. ನಾಗಪ್ಪ.—ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕೆಲಸ ನಡೆಸುತ್ತೇವೆ ಎನ್ನುತಕ್ಕಂಥ ಆಶ್ವಾಸನೆಯನ್ನು ತಾವು ಹಿಂದೆ ಕೊಟ್ಟಿದ್ದೀರಿ, ಈ ದಿವಸ ಕೂಡ ಅದನ್ನು ಹೇಳುತ್ತಿದ್ದೀರಿ, ಇದರ ಬಗ್ಗೆ ನಮಗೆ ವಿಶ್ವಾಸ ಕೂಡ ಇದೆ. ಆದರೆ ಈಗ ಅಲ್ಲಿ ಕೆಲಸ ನಡೆಯುತಕ್ಕಂಥಾ ಸ್ಥಿತಿಯನ್ನು ನೋಡಿದರೆ ಈ ಪ್ರಾಜೆಕ್ಟ್ 1976ನೇ ಇಸವಿಗೆ ಯಾವ ತಾರೀಖಿಗೆ ಮುಗಿಯುತ್ತದೆ ಎಂದು ತಾವು ಒಂದು ನಿರ್ದಿಷ್ಟವಾಗಿ ಇಟ್ಟುಕೊಂಡಿದ್ದೀರೋ ಆ ವೇಳೆಗೆ ಇದು ಮುಗಿಯುವುದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದಕ್ಕಾಗಿ ತೀವ್ರ ಗತಿಯಲ್ಲಿ ಈ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಬೇಕಾಗಿದ್ದರೆ ತಾವು ವರ್ಲ್ಡ್ ಬ್ಯಾಂಕಿನಿಂದ ಸಾಲವನ್ನು ಪಡೆಯುವುದಕ್ಕೆ ಪ್ರಯತ್ನಮಾಡಿ ಆದಷ್ಟು ಜಾಗ್ರತೆ ಸಾಲವನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ವರ್ಲ್ಡ್ ಬ್ಯಾಂಕಿನಿಂದ ಕೇಂದ್ರ ಸರ್ಕಾರದವರು ನಮಗೆ ಸಾಲವನ್ನು ಸ್ಯಾಂಕ್ಷನ್ ಮಾಡಿಸಿಕೊಡಬೇಕಾಗುತ್ತದೆ. ಅದಕ್ಕಾಗಿ ಅವರು ನಮ್ಮಿಂದ ಏನು ಇನ್‌ಫರ್‌ಮೇಷನ್ ಕೇಳಿದ್ದಾರೆ ಅದನ್ನು ನಾವು ಕೊಟ್ಟಿದ್ದೇವೆ. ಎಕ್ಸ್‌ಪರ್ಟ್‌ಗಳು ಇಲ್ಲಿಗೆ ಬಂದು ನೋಡಿಕೊಂಡು ಹೋಗಿದ್ದಾರೆ. ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಮತ್ತು ಅವರು ಕೆಲವು ಇನ್‌ಫರ್‌ಮೇಷನ್‌ಗಳನ್ನು ಕೇಳಿದ್ದರು. ಅವುಗಳನ್ನು 1970ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಕಳುಹಿಸಿ ಕೊಟ್ಟಿದ್ದೇವೆ. ಮತ್ತು ನಾವೂ ಸಹ ಇದು ಬಹಳ ದೊಡ್ಡ ಪ್ರಾಜೆಕ್ಟ್ ಇದನ್ನು ಮಾಡಿಸಿಕೊಡಿ ಎಂದು ಕೇಂದ್ರ ಸರ್ಕಾರದವರನ್ನು ಕೇಳುತ್ತಿದ್ದೇವೆ. ಈ ಮಧ್ಯದಲ್ಲಿ ಅವರಿಂದ ಸಹಾಯ ಬರುವ ತನಕ ಕಾಯದೆ ಈ ಪ್ರಾಜೆಕ್ಟಿನ ಎರಡು ಕಡೆಯ ಡ್ಯಾಮ್ ವರ್ಕ್ಸ್ ನಡೆಯುತ್ತಿದೆ.

ಶ್ರೀ ಬಾಪುಗೌಡ.—ವರ್ಲ್ಡ್ ಬ್ಯಾಂಕಿನಿಂದಲಾಗಲೀ. ಕೇಂದ್ರ ಸರ್ಕಾರದಿಂದಲಾಗಲೀ ನಮಗೆ ಹೆಚ್ಚು ಪ್ರಮಾಣದ ಹಣಸಹಾಯ ರೋನು ಸಿಕ್ಕತಕ್ಕ ಅಭಿಪ್ರಾಯ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನರ್ ಡೆವೆಲಪ್‌ಮೆಂಟ್ ಟೀಮಿನವರು ಮತ್ತು ಪ್ರತಿನಿಧಿಗಳು ಇಲ್ಲಿಗೆ ಬಂದು ಪ್ರಾಜೆಕ್ಟನ್ನು ನೋಡಿದ್ದಾರೆ, ನಮ್ಮ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ, ನಮಗೆ ನೀರಾವರಿ ಸೌಕರ್ಯ ಬಹಳ ಕತಿಮೆ ಇದೆ, ನಮಗೆ ನೀರಾವರಿ ಸೌಕರ್ಯವನ್ನು ಹೆಚ್ಚು ಮಾಡುವದಕ್ಕೆ ಹೆಚ್ಚಿನ ಮಟ್ಟದಲ್ಲಿ ಸಹಾಯ ಮಾಡಬೇಕೆಂದು ಅವರ ಜೊತೆಯಲ್ಲಿ ಹೇಳಿದ್ದೇವೆ, ಅವರ ಮುಖಾಂತರ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಆದಷ್ಟು ಜಾಗ್ರತೆಯಾಗಿ ಆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದಿರಿ, ಕೇಂದ್ರ ಸರ್ಕಾರವಲ್ಲಿ ಇಂಡಿಕೇಟ್ ಸರ್ಕಾರ ಇದೆ. ಇಲ್ಲಿ ಸಿಂಡಿಕೇಟ್ ಸರ್ಕಾರ ಇದೆ, ಆದ್ದರಿಂದ ಸಿಂಡಿಕೇಟ್ ಸರ್ಕಾರದವರು ಇದಕ್ಕೆ ಹಣವನ್ನು ಕೊಡಿಸದಿದ್ದರೆ ಅಲ್ಲಿಂದ ಹಣವನ್ನು ತರುವುದಕ್ಕೆ ಬೇರೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದು ಇಂಡಿಕೇಟ್, ಸಿಂಡಿಕೇಟ್ ಸರ್ಕಾರದ ಪ್ರಶ್ನೆಅಲ್ಲ. ಇದು ವರ್ಲ್ಡ್ ಬ್ಯಾಂಕಿನಿಂದ ಹಣ ಸಹಾಯವನ್ನು ಪಡೆಯುವಂತಹ ಪ್ರಶ್ನೆ. ಅಲ್ಲಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಕೇಂದ್ರ ಸರ್ಕಾರದಿಂದ ಏನೇನು ಸಹಾಯವಮ್ನ ಪಡೆಯಬೇಕೋ ಅದನ್ನು ಪಡೆಯುವ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಮತ್ತು ಅದು ಬರುವ ತನಕ ನಾವು ನುಮ್ಮನೆ ಕುಳಿತುಕೊಂಡಿಲ್ಲ. ನಮ್ಮ ಕೆಲಸವನ್ನು ನಾವು ಪ್ರಾರಂಭ ಮಾಡಿದ್ದೇವೆ.

ಶ್ರೀ ಎ. ಎನ್. ಪಾಟೀಲ್.—ಈ ಪ್ರಾಜೆಕ್ಟಿನ ಕೆಲಸವನ್ನು ಪ್ರಾರಂಭಮಾಡಿ ಎಂದು ವರ್ಲ್ಡ್ ಬ್ಯಾಂಕಿನವರು ಹೇಳಿದ್ದಾರೆಯೇ, ಒಂದು ವೇಳೆ ವರ್ಲ್ಡ್ ಬ್ಯಾಂಕಿನಿಂದ ಸಾಲ ಬಾರದಿದ್ದರೆ ನಮ್ಮ ಇಂಟರ್‌ನರ್ ರಿಸೋರ್ಸಸ್ ರೈಜ್ ಮಾಡಿಕೊಳ್ಳತಕ್ಕಂಥ ಒಂದು ಯೋಜನೆಯನ್ನು ಇಟ್ಟು ಕೊಂಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬ್ಯಾಂಕಿನ ಷರತ್ತಿನ ಪ್ರಕಾರ ಆಲ್ಲಿ ರೋನ್ ತೆಗೆದುಕೊಳ್ಳುವುದು ಕೇಂದ್ರ ಸರ್ಕಾರದವರ ಜವಾಬ್ದಾರಿ, ನಾವು ನೇರವಾಗಿ ವರ್ಲ್ಡ್ ಬ್ಯಾಂಕಿನವರೊಡನೆ ಚರ್ಚೆ ಮಾಡುವಂತಿಲ್ಲ. ನಾವು ಕೇಂದ್ರ ಸರ್ಕಾರದವರ ಮುಖಾಂತರ ವರ್ಲ್ಡ್ ಬ್ಯಾಂಕಿನಿಂದ ಸಾಲವನ್ನು ಕೊಡಿಸಬೇಕೆಂದು ಕೇಳಿದ್ದೇವೆ. ಎಕ್ಸ್‌ಪರ್ಟ್ ಇಲ್ಲಿಗೆ ಬಂದು ಎಲ್ಲವನ್ನೂ ನೋಡಿಕೊಂಡು ಹೋಗಿದ್ದಾರೆ. ನಮಗೆ ವರ್ಲ್ಡ್ ಬ್ಯಾಂಕಿನಿಂದ ಹಣ ಸಹಾಯ ಸಿಕ್ಕಿದರೆ ಕೇಂದ್ರ ಸರ್ಕಾರದವರ ಮುಖಾಂತರ ಸಿಕ್ಕುತ್ತದೆ ; ಆವರು ಕೊಡದಿದ್ದರೆ ಈಗಾಗಲೇ ನಾವು ನೀರಾವರಿಗೆ ಹೆಚ್ಚು ಹಣವನ್ನು ಒದಗಿಸಿ ನೀರಾವರಿ ಸೌಕರ್ಯವನ್ನು ಒದಗಿಸಬೇಕೆಂಬ ದೃಷ್ಟಿಯಿಂದ ಒಂದು ರಿಸೋರ್ಸಸ್ ಕಮಿಟಿಯನ್ನು ಮಾಡಿದ್ದೇವೆ. ಅವರು ಈಗಾಗಲೇ ಒಂದು ವರದಿಯನ್ನು ಕೊಟ್ಟಿದ್ದಾರೆ. ನೀರಾವರಿ ಯೋಜನೆಗಳಿಗಾಗಿ ಸಂಪನ್ಮೂಲಗಳ ಕ್ರೋಢೀಕರಣದ ಬಗ್ಗೆ ಇನ್ನೊಂದು ವರದಿಯನ್ನು ಕೊಡ ಬೇಕಾಗಿದೆ, ಅವರು ಅದನ್ನು ಇನ್ನೂ ಕೊಟ್ಟಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ವಿಶ್ವಬ್ಯಾಂಕ್‌ನವರು ಕೇಂದ್ರ ಸರ್ಕಾರದ ಅಜ್ಞೆಯ ಮೇರೆಗೆ ನಮ್ಮ ರಾಜ್ಯದಲ್ಲಿ ಸುತ್ತಾಡಿಹೋದಂತೆ ಇತರೇ ರಾಜ್ಯಗಳಲ್ಲಿಯೂ ಕೂಡ ಸುತ್ತಾಡಿಹೋಗಿ ನಮ್ಮ ರಾಜ್ಯ ಬಿಟ್ಟು ಬೇರೆ ರಾಜ್ಯದ ಯೋಜನೆಗಳಿಗೇನಾದರೂ ಅವರು ಸಹಾಯ ಮಾಡಿರುವುದು ನಮ್ಮ ಸರ್ಕಾರಕ್ಕೆ ತಿಳಿದುಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಯಾವ ರಾಜ್ಯದ ಯಾವ ಪ್ರಾಜೆಕ್ಟಿಗೆ ಸಹಾಯ ಮಾಡಿದ್ದಾರೆ ಎಂಬ ವಿವರ ನಮ್ಮಮುಂದೆ ಇಲ್ಲ. ಈ ಯೋಜನೆಗೆ ಮಾತ್ರ ಇದುವರೆಗೆ ವಿಶ್ವಬ್ಯಾಂಕ್ ನಿಂದ ನಮಗೆ ಸಹಾಯ ಸಿಕ್ಕಿಲ್ಲ.

ಶ್ರೀ ಕೆ. ಪಿ. ನಾಡಗೌಡ.—ವಿಶ್ವಬ್ಯಾಂಕ್‌ನವರು ಸಹಾಯ ಕೊಡದಿದ್ದರೂ ಕೂಡ ನಮ್ಮ ಹಣದಿಂದಲೇ ಯೋಜನೆಯನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆಂದು ಹೇಳಿದಿರಿ. ಘಟಪ್ರಭಾ ರೈಟ್ ಬ್ಯಾಂಕ್ ಚಾನಲ್ ಕೆಲಸದ ಬಗ್ಗೆ ಟೆಂಡರ್ಸ್‌ನ್ನು ಕರೆದು, ನಂತರ ಟೆಂಡರ್ಸ್‌ನ್ನು ಫಿಪ್ಟಿ ಕೊಂಡು ಸಂಬಂಧಪಟ್ಟ ಕಂಟ್ರಾಕ್ಟರ್ ಕೆಲಸ ಕೊಡಿ ಎಂದು ಕೇಳಿದರೆ ಅವರಿಗೆ ಇಲ್ಲ ಕೆಲಸ ಮಾಡಲು ಪ್ರೈಸ್ ಮಾಡಬೇಡಿ, ನಿಮಗೆ ನಾರಾಯಣಪುರದ ಡ್ಯಾಮ್ ಕೆಲಸ ಕೊಡುತ್ತೇವೆಂದು ಹೇಳುತ್ತಿರುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಅಪ್ಪರ್ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಪ್ರಶ್ನೆ ಇರುವುದು. ಘಟಪ್ರಭಾ ಪ್ರಾಜೆಕ್ಟ್ ಬಗ್ಗೆ ಒದಗಿಸಿರುವ ಯಾವ ಫಂಡನ್ನು ಸಹ ಈ ಯೋಜನೆಗೆ ಡೈವರ್ಟ್ ಮಾಡುವ ಪ್ರಶ್ನೆಯೇ ಇಲ್ಲ.

ಶ್ರೀ ಎನ್. ಎಸ್. ಅರಕೇರಿ.—ಈ ಯೋಜನೆಯ ಪರಿಶೀಲನೆಗೆ ವಿಶ್ವಬ್ಯಾಂಕ್‌ನವರು ಬಂದಿದ್ದಾಗ ಅವರ ಜೊತೆಯಲ್ಲಿ ನಮ್ಮ ರಾಜ್ಯದ ಪ್ರತಿನಿಧಿಗಳು ಯಾರು ಯಾರು ಇದ್ದರು ಮತ್ತು ಅಲ್ಲಿ ಅವರ ಜೊತೆಯಲ್ಲಿ ಏನೇನು ಚರ್ಚೆ ನಡೆಸರಾಯಿತು ಎಂಬುದನ್ನು ಹೇಳುತ್ತೀರಾ ? ಈ ಯೋಜನೆಯ ಬಗ್ಗೆ ದಿವಂಗತ ಶಾಸ್ತ್ರಿಯವರು ಹಾಕಿದ್ದ ಅಸ್ತಿಭಾರ ಶಿಲೆಯನ್ನು ಯಾರೋ ಕಿತ್ತು ಹಾಕಿದ್ದರು, ಅದನ್ನು ಈಗ ಅಲ್ಲಿ ಮತ್ತೆ ನೆಡರಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ವಿಶ್ವಬ್ಯಾಂಕ್‌ನ ಟೀಮ್‌ನವರು ಅಲ್ಲಗೆ ಬಂದಿದ್ದಾಗ ಅವರ ಜೊತೆಯಲ್ಲಿ ಕೇಂದ್ರ ಸರ್ಕಾರದ ಅಧಿಕಾರಿಗಳು ಇದ್ದರು, ನಮ್ಮ ರಾಜ್ಯದ ಸಂಬಂಧಪಟ್ಟ ಚೀಫ್ ಇಂಜಿನಿಯರ್‌ಗಳು ಇದ್ದರು ಮತ್ತು ರಾಜ್ಯಶಾಖೆಯ ಅಧಿಕಾರಿಗಳು ಇದ್ದರು. ಈ ಎಲ್ಲ ಅಧಿಕಾರಿಗಳು ಕೂಡ ಆ ಟೀಮ್‌ನವರನ್ನು ಡ್ಯಾಮ್ ಸೈಟ್ ಏರಿಯಾಕ್ಕೆ ಕರೆದುಕೊಂಡು ಹೋಗಿ ತೋರಿಸಿರುವುದಲ್ಲದೆ, ಯೋಜನೆಯ ಕೆಲಸ ಮುಗಿದ ಮೇಲೆ ಎಷ್ಟು ಭಾಗ ನೀರಾವರಿಯಾಗುತ್ತದೆ ಎಂಬ ಪ್ರದೇಶವನ್ನೆಲ್ಲಾ ತೋರಿಸಿ ಸಾಕಷ್ಟು ಪ್ರವಾಸ ಮಾಡಿಸಿದ್ದಾರೆ. ಆ ಟೀಮ್‌ನವರು ನಮ್ಮ ಅಧಿಕಾರಿಗಳ ಜೊತೆಯಲ್ಲಿ ಈ ಯೋಜನೆಯಿಂದ ಎಷ್ಟು ಭಾಗ ನೀರಾವರಿಯಾಗುತ್ತದೆ, ಈ ಯೋಜನೆಯು ಫೀಸಿಬಲಟಿ ಇದೆಯೋ ಇಲ್ಲವೋ ಎಂಬುದನ್ನು ಮತ್ತು ಟೆಕ್ನಿಕಲ್ ಸ್ಟೆಡ್ ಮುಂತಾದ ವನ್ನು ಚರ್ಚೆ ಮಾಡಿಕೊಂಡು ಹೋಗಿದ್ದಾರೆ. ಅಸ್ತಿಭಾರಶಿಲೆಯ ಬಗ್ಗೆ ಮಾನ್ಯ ಸದಸ್ಯರು ಕೇಳಿದರು, ಅವರಿಗೂ ಗೊತ್ತಿರಬಹುದು, ಕೆಲಸ ಪ್ರಾರಂಭ ಮಾಡುವುದಕ್ಕೆ ಮೊದಲು ಅಸ್ತಿಭಾರಶಿಲೆಯನ್ನು ಹಾಕಿಸಲಾಗುತ್ತದೆ. ಅದರಂತೆ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಈ ಯೋಜನೆಗೆ ಅಸ್ತಿಭಾರಶಿಲೆಯನ್ನು ಹಾಕಿದ್ದರು. ಆ ರೀತಿ ಹಾಕಿದ್ದಕ್ಕೆ ಸಾಕಷ್ಟು ಸಾಕ್ಷಿ ಮತ್ತು ಪುರಾವೆಗಳು ಇವೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ರಾಜ್ಯಪಾಲರು ಒಂದು ಸಭೆಯಲ್ಲಿ ಮಾತನಾಡುತ್ತಾ ಈ ಸಮಸ್ಯೆ ಟ್ರಬ್ಯುನರ್ ಮುಂದೆ ಇರುವುದರಿಂದ ಈ ಯೋಜನೆಯ ಎರಡನೆ ಹಂತ ಪ್ರಾರಂಭ ಮಾಡಬಾರದೆಂದು ಹೇಳಿದ್ದಾರೆ. ಇದು ರಾಜ್ಯಪಾಲರ ವೈಯಕ್ತಿಕ ಅಭಿಪ್ರಾಯವೇ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಲಿಲ್ಲ. ರಾಜ್ಯಪಾಲರ ಅಭಿಪ್ರಾಯದ ಪ್ರಕಾರ ಸರ್ಕಾರದವರು ಎರಡನೆಯ ಹಂತವನ್ನು ಪ್ರಾರಂಭ ಮಾಡಬಾರದೆಂದು ತೀರ್ಮಾನ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ರಾಯಚೂರಿನಲ್ಲಿ ನಡೆದ ಒಂದು ಸಭೆಯಲ್ಲಿ ಮಾನ್ಯ ರಾಜ್ಯಪಾಲರು ಏನು ಹೇಳಿದ್ದಾರೆಂಬುದನ್ನು ಈಗ ನೆನಪು ಇಟ್ಟುಕೊಂಡು ಹೇಳುವುದಕ್ಕಾಗುವುದಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ, ಅಪ್ಪರ್ ಕೃಷ್ಣಾ ಮೇಲ್ದಂಡೆ ಯೋಜನೆಗೆ ಯೋಜನೆಯ ಮೊದಲನೆಯ ಸ್ಟೇಜಿಗೆ ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಸಿಕ್ಕಿದೆ, ಎರಡನೆಯ ಸ್ಟೇಜಿಗೆ ಕ್ಲಿಯರೆನ್ಸ್ ಸಿಕ್ಕಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನಾಗಪ್ಪನವರು ಈ ಯೋಜನೆಗೆ ಯಾವ ಯಾವ ಭಾಗದಿಂದ ಸಹಾಯ ಬರುತ್ತದೆಂದು ಪ್ರಶ್ನೆ ಕೇಳಿದ್ದಾರೆ. ಈ ಯೋಜನೆಗೆ ವಿಶ್ವಬ್ಯಾಂಕ್‌ನವರಾಗಲೀ ಅಥವಾ ಕೇಂದ್ರ ಸರ್ಕಾರದವರಾಗಲೀ ಸಹಾಯ ಮಾಡುವುದಕ್ಕೆ ತಯಾರಿಲ್ಲದಿದ್ದರೆ ರಾಜ್ಯಸರ್ಕಾರದವರೇ ಈ ಯೋಜನೆಯನ್ನು ಮುಗಿಸುವುದಕ್ಕೆ ಏನಾದರು ರಿಸೋರ್ಸಸ್‌ನ್ನು ಹುಡುಕಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಕೆಲಸ ಪ್ರಾರಂಭವಾಗಿದೆ. ಈ ಯೋಜನೆ ಕೆಲಸ ನಿಲ್ಲುವ ಹಾಗಿಲ್ಲ. ಈ ಯೋಜನೆಯನ್ನು ಅದಷ್ಟು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನೆಲ್ಲಾ ಹಾಕಿಕೊಳ್ಳುತ್ತಿದ್ದೇವೆ. ಮತ್ತು ಅದಷ್ಟು ಜಾಗ್ರತೆ ಮುಗಿಸುವುದಕ್ಕೆ ಪೂರ್ಣ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ನಾಗಾರ್ಜುನ ಸಾಗರ ಯೋಜನೆಗೆ ಕೇಂದ್ರ ಸರ್ಕಾರದವರು ಸಾಕಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆಂಬುದು ಸಾರ್ವಜನಿಕರಿಗೆ ಗೊತ್ತಿದೆ. ನಮ್ಮ ರಾಜ್ಯದ ಪ್ರಾಜೆಕ್ಟ್‌ಗಳ ಬಗ್ಗೆ ಅದೇ ರೀತಿ ಸಹಾಯ ಮಾಡಿರುವುದನ್ನು ನೋಡಿದರೆ ಕೇಂದ್ರಸರ್ಕಾರ ನಮ್ಮ ರಾಜ್ಯದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಯೋಜನೆಯ ಬಲದಂಡೆ ಕಾಲುವೆ ಬಗ್ಗೆ ಕೇಂದ್ರದ ಅನುಮತಿ ಕೇಳುವುದರಿಂದ ಹಾನಿಯಾಗಬಹುದೆಂಬ ಮಾತನ್ನು ರಾಜ್ಯಪಾಲರು ಹೇಳಿದ್ದಾರೆ. ನನ್ನ ಹತ್ತಿರ ಕೇಂದ್ರ ಸರ್ಕಾರದ ಒಂದು ಪುಸ್ತಕ ಇದೆ. ಆ ಪುಸ್ತಕದಲ್ಲಿರುವುದನ್ನು ನೋಡಿದರೆ ಅಪ್ಪರ್ ಕೃಷ್ಣಾ ಯೋಜನೆಯನ್ನು ಎರಡು ಡಿವಿಜನ್‌ಗಳಾಗಿ ಎಂಗಡಿಸಿಲ್ಲ. ಒಂದೇ ಸ್ಕೀಮ್ ಎಂಬುದಾಗಿ ಇದೆ. ಅದೇ ಘಟಪ್ರಭಾ ಯೋಜನೆಗೆ ಎರಡು ಸ್ಕೀಮ್‌ಗಳಿವೆ. ಹಣದುಬ್ಬರದ ಕಾರಣದಿಂದ ನಮ್ಮ ಸರ್ಕಾರದವರು ಎರಡು ಸ್ಕೀಮ್ ಎಂದು ಮಾಡಿಕೊಂಡಿದ್ದಾರೆ. ಆದಕಾರಣ ಎರಡನೆ ಸ್ಕೀಮ್‌ಗೆ ಕೇಂದ್ರಸರ್ಕಾರದ ಕ್ಲಿಯರೆನ್ಸ್ ಬೇಕಾಗಿಲ್ಲ. ಆಂಧ್ರದವರು ಕೂಡ ನಾಗಾರ್ಜುನಸಾಗರ ಯೋಜನೆಯ ಎರಡನೆಯ ಹಂತಕ್ಕೆ ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಪಡೆಯದೆ ಕಟ್ಟಡಮುಗಿಸಿದರು. ನೀರಿನ ಉಪಯೋಗದ ಬಗ್ಗೆ ಟ್ರಿಬ್ಯುನಲ್‌ಗೆ ಹೋಗಿರುವುದರಿಂದ ಎರಡನೆಯ ಹಂತಕ್ಕೆ ಕೇಂದ್ರ ಸರ್ಕಾರದ ಕ್ಲಿಯರೆನ್ಸ್ ಕೇಳುವುದು ಸರಿಯಲ್ಲ ಎಂದು ರಾಜ್ಯಪಾಲರು ಹೇಳಿರುವುದು ಸರಿಯಲ್ಲ. ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರದಲ್ಲಿ ಮಾನ್ಯ ರಾಜ್ಯಪಾಲರು ಏನು ಹೇಳಿದ್ದಾರೆ, ಅದು ಸರಿಯೇ ಅಥವಾ ಇಲ್ಲವೇ ಎಂಬುದನ್ನು ಕಾಮೆಂಟ್ ಮಾಡುವುದು ಉಚಿತವಲ್ಲ ಎಂದು ನನಗನ್ನಿಸುತ್ತದೆ. ಮಾನ್ಯ ಸದಸ್ಯರು ಅಪ್ಪರ್ ಕೃಷ್ಣಾ ಯೋಜನೆಗೆ ಸ್ಕೀಜಸ್ ಇಲ್ಲ, ಒಂದೇ ಪ್ರಾಜೆಕ್ಟ್ ಎಂದು ಹೇಳಿದ್ದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅಪ್ಪರ್ ಕೃಷ್ಣಾ ಯೋಜನೆಯು ಒಂದನೇ ಸ್ಕೀಜಿಗೆ ಕ್ಲಿಯರೆನ್ಸ್ ಸಿಕ್ಕಿದೆ. ಎರಡನೆಯ ಸ್ಕೀಜ್‌ಗೆ ಕ್ಲಿಯರೆನ್ಸ್ ಕೊಡಬೇಕೆಂದು ನಾವು ಕೇಂದ್ರ ಸರ್ಕಾರವನ್ನು ಪದೇ ಪದೇ ಕೇಳಿದ್ದೇವೆ. ಆದರೆ ಕ್ಲಿಯರೆನ್ಸ್ ಕೊಟ್ಟಿಲ್ಲ. ಆದ್ದರಿಂದ ಎರಡು ಸ್ಕೀಜ್‌ಗಳಿರುವುದು ಸ್ಪಷ್ಟವಾಗಿದೆ. ಈ ಯೋಜನೆಗೆ ಕೇಂದ್ರದಿಂದ ಯಾವ ಸಹಾಯವೂ ಸಿಕ್ಕಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಮತ್ತು ನಾಗಾರ್ಜುನಸಾಗರ ಯೋಜನೆಗೆ ಸಾಕಷ್ಟು ಕೇಂದ್ರದ ಸಹಾಯ ಸಿಕ್ಕಿತು ಎಂಬುದನ್ನು ಹೇಳಿದರು. ನಾಗಾರ್ಜುನಸಾಗರ ಯೋಜನೆ ಕೆಲಸ ಬಹಳ ಕಾಲದ ಹಿಂದೆಯೇ ಪ್ರಾರಂಭವಾಗಿತ್ತು. ಮತ್ತು ಅದು ಪ್ಲಾನ್‌ನಲ್ಲಿ ಸೇರಿಸಿದ್ದರಿಂದ ಕೇಂದ್ರಸರ್ಕಾರದವರು ಪ್ರತಿವರ್ಷವೂ ಕೂಡ ಪ್ಲಾನ್ ಸೀಲಿಂಗ್‌ನಲ್ಲಿ ಆ ಯೋಜನೆಗೆ ಹಣವನ್ನು ಒದಗಿಸುತ್ತಿದ್ದರು.

Election to Bangalore City Corporation

70. Sri T. R. SHAMANNA (Fort).—

Will the Minister of State for Municipal Administration be pleased to state :—

(*a*) the date when the Bangalore City Corporation was superseded, for the first time and for what period ;

(*b*) the number of times and for what periods, the supersession has been extended from time to time and the reasons for such extensions ;

(*c*) when elections to the Bangalore City Corporation will be held and the proposed Calendar of Events in that behalf ?